ದಿನಾಂಕಃ 09.06.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದ:**

ನಾನು ಕಳೆದ 1 ವರ್ಷದಿಂದ ಕಿರಗುಂದ ಗ್ರಾಮ ಪಂಚಾಯ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ದಾವಾ ಸ್ವತ್ತಿನ ಸ.ನಂ.124 ಅದರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದು ಹೇಳಲು ಸಾದ್ಯವಿಲ್ಲ. ಕಿರಗುಂದದ ಸ.ನಂ.124 ರಲ್ಲಿ ಸರ್ಕಾರಿ ಗೋಮಾಳ ಇರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸ.ನಂ.124 ರ ಜಮೀನು ಕಾಫೀ ಬೆಳೆಯನ್ನು ಹೊಂದಿರುತ್ತದೆ. ನಾನು ನ್ಯಾಯಲಯಕ್ಕೆ ತಕರಾರನ್ನು ಸಲ್ಲಿಸುವ ಪೂರ್ವದಲ್ಲಿ ವಾದಿಯವರು ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿರುತ್ತೇನೆ. ದಾವಾ ಸ್ವತ್ತಿನ ಪೂರ್ವಕ್ಕೆ ಸ.ನಂ.126 ಎಂದರೆ ಸರಿ. ಪಶ್ಚಿಮ್ಕೆ ಸ.ನಂ.160 ಎಂದರೆ ಸರಿ. ಅದೇ ರೀತಿ ಉತ್ತರಕ್ಕೆ ಸ.ನಂ.123 ಮತ್ತು ದಕ್ಷಿಣಕ್ಕೆ ಸ.ನಂ.125 ಎಂದರೆ ಸರಿ. ದಾವಾ ಸ್ವತ್ತು ವಾದಿಯವರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ನಾನು ಭೇಟಿ ನೀಡಿರುತ್ತೇನೆ. ದಾವಾ ಸ್ವತ್ತಿನಲ್ಲಿ ಒಂದು ಕುಡಿಯುವ ನೀರಿನ ಬಾವಿ ಇದ್ದು ಅದರಲ್ಲಿರುವ ಮೋಟಾರ್ ಕೆಟ್ಟುಹೋದ ಸಮಯದಲ್ಲಿ ಅದನ್ನು ರಿಪೇರಿ ಮಾಡುವ ಕಾರಣ ಭೇಟಿ ನೀಡುತ್ತೇನೆ. ನಾನು ಕಿರಗುಂದ ಪಂಚಾಯ್ತಿಗೆ ಬಂದ ನಂತರದಲ್ಲಿ ಎರಡು ಬಾರಿ ರಿಪೇರಿ ಮಾಡಿಸಿರುತ್ತೇನೆ. ಸದರಿ ರಿಪೇರಿ ಮಾಡಿಸಿದ ಬಾಬ್ತು ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತಿನಲ್ಲಿರುವ ಕುಡಿಯುವ ನೀರಿನ ಬಾವಿಯು 8 ಅಡಿ ಅಗಲು 25 ಅಡಿ ಆಳ ಇರಬಹುದು.

ಸಾಮಾನ್ಯವಾಗಿ ಖಾಸಗಿ ಜಮೀನಿನಲ್ಲಿ ಸರ್ಕಾರಿ ಕೆಲಸಗಳನ್ನು ಮಾಡುವಾಗ ಸದರಿ ಜಮೀನಿನ ಮಾಲೀಕರಿಂದ NOC ಯನ್ನು ಪಡೆಯಬೇಕು ಎಂದರೆ ಸರಿ. ಸಾಕ್ಷಿಯು ಮುಂದುವರೆದು ದಾವಾ ಸ್ವತ್ತಿನಲ್ಲಿ ನಿರ್ಮಿಸಿರುವ ಕುಡಿಯುವ ನೀರಿನ ಬಾವಿಯು 1997 ರಲ್ಲಿ ನಿರ್ಮಿಸಿರುವ ಕಾರಣ ಆಗಿನ ಅಧಿಕಾರಿಗಳು ಪಡೆದಿರಬಹುದು. ಸದರಿ ದಾಖಲಾತಿಯನ್ನು ಮುಂದೆ ಹಾಜರುಪಡಿಸಬಲ್ಲೆ. ದಾವಾ ಸ್ವತ್ತಿನಲ್ಲಿ ಯಾವುದೇ ಸರ್ಕಾರಿ ಬಾವಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಸ್ವತ್ತಿನಲ್ಲಿ ಕುಡಿಯುವ ನೀರಿನ ಬಾವಿಯನ್ನು ವಾದಿಯವರಿಗೆ ನೀಡಲಾಗಿರುತ್ತದೆ ಎಂದು ನುಡಿಯುತ್ತಾರೆ. 1997 ನೇ ಸಾಲಿನಲ್ಲಿ ದಾವಾ ಸ್ವತ್ತು ವಾದಿಯವರು ಅಜ್ಜನಾದ ಕೆ.ಬಿ. ರಾಮಪ್ಪಗೌಡ ಎಂಬುವವರ ಹೆಸರಿನಲ್ಲಿ ಇರುತ್ತದೆ. ಕಿರಗುಂದದ ಗ್ರಾಮ ಪಂಚಾಯ್ತಿಯ ವ್ಯಾಪ್ತಿಯಲ್ಲಿ ಒಟ್ಟು 6 ಕುಡಿಯುವ ನೀರಿನ Systen ಗಳು ಇರುತ್ತವೆ. ಸಾಮಾನ್ಯವಾಗಿ ಗ್ರಾಮ ಪಂಚಾಯ್ತಿಯಲ್ಲಿ ನೀರನ್ನು ಬಿಡಲು ಒಬ್ಬರನ್ನು ನೇಮಕ ಮಾಡಲಾಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿರುವ ಕುಡಿಯುವ ನೀರಿನ ಬಾವಿಯಲ್ಲಿ ನೀರನ್ನು ಬಿಡಲು ಯಾರನ್ನು ನೇಮಕ ಮಾಡಿರುವುದಿಲ್ಲ, ಸದರಿ ಗ್ರಾಮದ ಫಲಾನುಭವಿಗಳು ಅದನ್ನು ಅವರವರೇ ಉಪಯೋಗಿಸಿಕೊಳ್ಳುತ್ತಿದ್ದಾರೆ. ಸದರಿ ವಿಷಯ ಸುಳ್ಳು ಎಂದರೆ ಸರಿಯಲ್ಲ.

ಒಂದು ವೇಳೆ ದಾವಾ ಸ್ವತ್ತಿನಲ್ಲಿ ಕುಡಿಯುವ ನೀರಿನ ಬಾವಿಯನ್ನು ನಿರ್ಮಿಸಿದ್ದಲ್ಲಿ, ನೀರನ್ನು

ಬಿಡಲು ಒಬ್ಬ ವ್ಯಕ್ತಿಯನ್ನು ನೇಮಕ ಮಾಡುತ್ತಿದ್ದೀರಿ ಎಂದರೆ ಸಾಕ್ಷಿಯು ಸದರಿ ಗ್ರಾಮದಲ್ಲಿ ಕಡಿಮೆ ಮನೆಗಳು ಇರುವ ಕಾರಣ ನೇಮಕ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿರುವ ಕುಡಿಯುವ ನೀರಿನ ಫಲಾನುಭವಿಗಳ ಮನೆಯು 16 ಆಗಿರುತ್ತದೆ. ಸದರಿ ವ್ಯಕ್ತಿಗಳನ್ನು ನಮ್ಮ ಪರವಾಗಿ ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಲು ಯಾವುದೇ ತೊಂದರೆ ಇರುವುದಿಲ್ಲ. ಸದರಿ ಫಲಾನುಭವಿಗಳು ಸತ್ಕಲ್ ಮತ್ತು ಕಜ್ಜೇಹಳ್ಳಿಗೆ ಸೇರಿದವರಾಗಿರುತ್ತಾರೆ. ಸದರಿ ಎರಡೂ ಗ್ರಾಮಗಳು ದಾವಾ ಸ್ವತ್ತಿನ ಬಾವಿಯಿಂದ ಅರ್ಧ ಕೀ.ಮೀ. ಅಂತರದಲ್ಲಿರುತ್ತದೆ. ವಾದಿಯವರು ಕಿರಗುಂದ ವಾಸಿಗಳು ಎಂದರೆ ಸಾಕ್ಷಿಯು ಕಿರಗುಂದ ಗ್ರಾಮದ ಸತ್ಕಲ್ ವಾಸಿ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲಿ ಅಳವಡಿಸಿರುವ ಮೋಟಾರು ಅಂದಾಜು 5 ಅಥವಾ 7 HP ಆಗಿರುತ್ತದೆ. ದಾವಾ ಸ್ವತ್ತಿನಲ್ಲಿರುವ ಕುಡಿಯುವ ನೀರಿನ ಬಾವಿಗೆ ಸತ್ಕಲ್ ಮತ್ತು ಕಜ್ಜೇಹಳ್ಳಿ ಗ್ರಾಮದ ವಾಸಿಗಳು ಬಂದು ಹೋಗುವುದರಿಂದ ವಾದಿಯ ಸ್ವಾಧೀನಾನುಭವಕ್ಕೆ ತೊಂದರೆಯಾಗುತ್ತದೆ ಎಂದರೆ ಸಾಕ್ಷಿಯು ಸದರಿ ಬಾವಿಗೆ ಪ್ರತ್ಯೇಕವಾದ ದಾರಿ ಇದೆ ಎಂದು ನುಡಿಯುತ್ತಾರೆ. ಸದರಿ ದಾರಿ ಕಾಲುದಾರಿಯಾಗಿರುತ್ತದೆ. ಸದರಿ ರಸ್ತೆಯು ದಾವಾ ಸ.ನಂ. ನಲ್ಲಿ ಹಾದುಹೋಗುತ್ತದೆ.

ದಾವಾ ಸ್ವತ್ತಿನಲ್ಲಿರುವ ಬಾವಿಗೆ ಪಂಚಾಯ್ತಿಯಿಂದ ಪ್ರತ್ಯೇಕವಾದ ರಸ್ತೆಯನ್ನು ಮಾಡಿಸಿರುವುದಿಲ್ಲ. ದಾವಾ ಸ್ವತ್ತಿನಲ್ಲಿರುವ ಮೋಟರ್ ನ ಸ್ಟಾಟರ್ ಗೆ ಒಂದು ಶೆಡ್ ನ್ನು ಮಾಡಿರುತ್ತೇವೆ. ಸದರಿ ಶೆಡ್ ನ್ನು ಪಿ.ಆರ್.ಇ.ಡಿ. ರವರು ನಿರ್ಮಿಸಿರುವ ಕಾರಣ ಅವರ ಬಳಿ ಇರಬಹುದು ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ಸಂಗ್ರಹಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಪಿ.ಆರ್.ಇ.ಡಿ. ರವರು ಯಾವುದೇ ರೀತಿಯ ಶೆಡ್ ನ್ನು ನಿರ್ಮಿಸಿರುವುದಿಲ್ಲ ಎಂದರೆ ಸರಿಯಲ್ಲ. ದಿ.28.09.2022 ರಂದು ವಾದಿಯ ಜಮೀನಿನಲ್ಲಿ ಬಲವಂತವಾಗಿ ವಾದಿಯವರು ಮಾಡಿಕೊಂಡಿರುವ ಬಾವಿಗೆ ಮೋಟಾರ್ ನ್ನು ಇಳಿಸಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸರ್ಕಾರಿ ಬಾವಿಯಲ್ಲಿ ಮೋಟಾರ್ ಹಾಳಾಗಿರುವ ಕಾರಣ ಮತ್ತು ಕುಡಿಯುವ ನೀರಿನ ಅವಶ್ಯಕತೆ ಇರುವ ಕಾರಣ ಸರಿಪಡಿಸಲು ನಾವು ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ದಾವಾ ಸ.ನಂ. ನಲ್ಲಿ ಯಾವುದೇ ರೀತಿಯ ಸರ್ಕಾರಿ ಬಾವಿ ಇರುವುದಿಲ್ಲ ಎಂದರೆ ಸರಿಯಲ್ಲ. ದಿ.28.09.2022 ರಂದು ವಾದಿಯು ಅವರ ಜಮೀನಿನಲ್ಲಿ ಮೋಟಾರ್ ಇಳಿಸುವುದನ್ನು ಪ್ರಶ್ನಿಸಿದಾಗ ಉಡಾಪೆಯಾಗಿ ಉತ್ತರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಇದರ ಸಂಬಂಧ ವಾದಿಯವರು ಗೋಣೀಬೀಡು ಪೋಲಿಸ್ ಠಾಣೆಯಲ್ಲಿ ದೂರನ್ನು ದಾಖಲಿಸಲು ಹೋದಾಗ ನನ್ನ ಪ್ರಭಾವದಿಂದ ದೂರನ್ನು ದಾಖಲಿಸಲು ಬಿಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಅದರ ಸಂಬಂಧ ವಾದಿಯವರು ತಮಗೆ ಆಗುತ್ತಿರುವ ಅನ್ಯಾಯದ ಕುರಿತು ಪರಿಹಾರವನ್ನು ಕೋರಿ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದರಿಂದಾಗಿ ವಾದಿಯವರಿಗೆ ಮತ್ತು ಸಾರ್ವಜನಿಕರಿಗೆ ಕುಡಿಯುವ ನೀರಿಗೆ ತೊಂದರೆಯಾಗುತ್ತದೆ

ಎಂದು ನುಡಿಯುತ್ತಾರೆ. ಸರ್ಕಾರಿ ಬಾವಿ ಎಂದು ತೋರಿಸಲು ಯಾವುದೇ ದಾಖಲಾತಿ ಇಲ್ಲದಿದ್ದರೂ ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.